3. ಶ್ರವಣಬೆಳಗೊಳದ ಬಾಹುಬಲಿಯ ಮಹಾ ಮಸ್ತಕಾಭಿಷೇಕಕ್ಕೆ ಓಡಾಡುವ ವಾಹನಗಳಿಗೆ ತೆರಿಗೆ ವಿನಾಯತಿ ನೀಡುವ ಸಂಬಂಧದಲ್ಲಿ ದಿನಾಂಕ 18-12-93ರಂದು ಹೊರಡಿಸಲಾದ ಹೆಚ್‌ಟಿಡಿ 160ಟಿಎಂಟಿ 93ನೇ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

VIII. ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು) :

1987ನೇ ಸಾಲಿನ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರೆಗೆ;

1991-92ನೇ ಸಾಲಿನ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

IX. ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಮಂತ್ರಿಗಳು) :

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ;

1991-92ನೇ ಸಾಲಿನ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 14ನೇ ವರದಿ (ವಿಳಂಬಕ್ಕೆ ಕಾರಣಗಳೊಂದಿಗೆ)ಯನ್ನು ಮಂಡಿಸುವುದು.

X. ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಮಂತ್ರಿಗಳು) :

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ ;

1990-91ನೇ ಸಾಲಿನ ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್ನ 18ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

XI. ಶ್ರೀ ರಾಮಲಿಂಗಾರೆಡ್ಡಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು) :

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ :

1. 1992-93ನೇ ಸಾಲಿನ ಮೈಸೂರು ಮಿನರಲ್ಸ್ ಲಿಮಿಟೆಡ್‌ನ 27 ನೇ ವಾರ್ಷಿಕ ವರದಿ;
2. 1992-93ನೇ ಸಾಲಿನ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ 58 ನೇ ವಾರ್ಷಿಕ ವರದಿ;
3. 1992-93ನೇ ಸಾಲಿನ ಎನ್.ಜಿ.ಇ.ಎಫ್. ಲಿಮಿಟೆಡ್ನ 28 ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು;
4. 1992-93ನೇ ಸಾಲಿನ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್‌ನ 59 ನೇ ವಾರ್ಷಿಕ ವರದಿ;
5. 1992-93ನೇ ಸಾಲಿನ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 13ನೇ ವಾರ್ಷಿಕ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರೈತರಿಂದ ಬಲಾತ್ಕಾರವಾಗಿ ಸಾಲ ವಸೂಲಾತಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ನಿನ್ನೆಯ ದಿವಸ ತಾವು ಹೇಳಿದ ಹಾಗೆ ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟರು. ರೈತರಿಂದ ಬಲಾತ್ಕಾರವಾಗಿ ಸಾಲ ವಸೂಲಾತಿಯ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು.

ಅದರ ಬಗ್ಗೆ ಈ ಸದನದಲ್ಲಿ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಿರಿ.

ಕಳೆದ ಎರಡು ದಿವಸಗಳಿಂದ ಸತತವಾಗಿ ಚರ್ಚೆ ಮಾಡುತ್ತಿದ್ದರೂ ಕೂಡ ಸರ್ಕಾರದ ಕಡೆಯಿಂದ ಸರಿಯಾದ ಉತ್ತರ ಬಾರದೇ ಇರುವುದರಿಂದ ರೈತ ಇವತ್ತು ಕಂಗಾಲಾಗಿದ್ದಾನೆ. ಇದು ಬರೀ ಯಡಿಯೂರಪ್ಪನ ಒಬ್ಬರ ಪ್ರಶ್ನೆ ಅಲ್ಲ. ಇದು ಇಡೀ ಸದನದ ಎಲ್ಲಾ ಸದಸ್ಯರ ಪ್ರಶ್ನೆ ಆಗಿದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ಸ್ ರೈತರ ಮೇಲೆ ಕೇಸ್‌ಗಳನ್ನು ಹಾಕಿ ಸಾಲ ವಸೂಲಾತಿ ಮಾಡುತ್ತಿದ್ದಾರೆ.

ಅಧ್ಯಕ್ಷರು : ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚೆ ಅನೇಕ ಸಲ ಆಗಿದೆ. ಆದರೂ ಕೂಡ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಈ ಸರ್ಕಾರಕ್ಕೆ ಕಣ್ಣು ಇಲ್ಲ ಮೂಗು ಇಲ್ಲ ಕಿವಿ ಇಲ್ಲದೆ ಕುಳಿತುಕೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟು ಭರವಸೆ ಏನಾಯಿತು?

ಅಧ್ಯಕ್ಷರು : ಈಗ ನಾನು ಸಭೆಯನ್ನು ಮಂದೂಡಿಸಲ್ಪಟ್ಟು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು 2-00 ಗಂಟೆಗೆ ಮುಕ್ತಾಯವಾಯಿತು)

ಸಭೆ ಪುನಃ 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

(ಅಧ್ಯಕ್ಷರು ಶ್ರೀ ವಿ.ಎಸ್. ಕೌಜಲಗಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು)

4. ಗಮನ ಸೆಳೆಯುವ ಸೂಚನೆಗಳು

ರಾಜ್ಯದ ಆರು ಜಿಲ್ಲೆಗಳಲ್ಲಿ ಐ.ಪಿ.ಪಿ.ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪೀಠೋಪಕರಣಗಳಿಲ್ಲದಿರುವ ಬಗ್ಗೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ರಾಜ್ಯದ ಆರು ಜಿಲ್ಲೆಗಳಲ್ಲಿ ಐ.ಪಿ.ಪಿ.ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮುಂತಾದವುಗಳಿಗೆ ಸಮರ್ಪಕವಾದ ಪೀಠೋಪಕರಣಗಳಿಲ್ಲದೆ, ಸಿಬ್ಬಂದಿಗಳ ಕೊರತೆಯಿರುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ

ಭಾರತ ಜನಸಂಖ್ಯಾ ಯೋಜನಾ-3ನ್ನು ವಿಶ್ವಬ್ಯಾಂಕ್ ನಿರವಿನಿಂದ 1984-85ರಿಂದ 1991-92ರ ತನಕ ಕಾರ್ಯಗತಗೊಳಿಸಿದ್ದು ಇದರ ವಿವರಗಳು ಈ ಕೆಳಕಂಡಂತೆ ಇವೆ.

		ಕೋಟಿ ರೂ.ಗಳಲ್ಲಿ
1. ಸಿವಿಲ್ ವರ್ಕ್ಸ್	-	48.94
2.ಪೀಠೋಪಕರಣಗಳು	-	2.25
3. ಸಲಕರಣೆಗಳು	-	2.25
4. ವಾಹನಗಳು	-	2.80
5. ಸಿಬ್ಬಂದಿ ಸಂಬಳ	-	8.66
6. ಕನ್‌ಸಲ್ಟೆಂಟ್ ಸರ್ವೀಸ್ ಅಂಡ್ ಟ್ರೈನಿಂಗ್	-	0.76